**<u>ಅಸಲು ದಾವಾ ಸಂಖ್ಯೆ 179/2020</u>** **ಡಿ.ಡಬ್ಲ್ಯೂ:- 1**

ದಿನಾಂಕಃ **08-12-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>**

ನಾನು ನಿರ್ಮಲಾ, ಸುಮಾಬಾಯಿ ಮತ್ತು ಜಯನಾಯ್ಕರವರಿಗೆ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ಉಪನೋಂದಣಿ ಕಚೇರಿಗೆ ಬಂದಿದ್ದೆನು. ನಾನು ನಾಗರಾಜನಾಯ್ಕರವರಿಗೆ ಈಗ್ಗೆ 20 ವರ್ಷಗಳ ಹಿಂದೆ ನನಗೆ ಸೇರಿದ ಆಸ್ತಿಯನ್ನು ಮಾರಾಟ ಮಾಡಿದ್ದೇನೆ. ಸಾಕ್ಷಿಗೆ ಕುಂಬಳೂರು ಸಂಗಮೇಶಪ್ಪರವರಿಗೆ ಆಸ್ತಿಯನ್ನು ಮಾರಾಟ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಅಣ್ಣ ವೆಂಕಟೇಶಪ್ಪ ಮಾರಾಟ ಮಾಡಿದ್ದರು ನಾನು ಅದಕ್ಕೆ ಸಹಿಯನ್ನು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಮಗೆ ಸೇರಿದ 3 ಎಕರೆ ಜಮೀನನ್ನು ಕುಂಬಳೂರು ಸಂಗಮೇಶಪ್ಪರವರಿಗೆ ಮಾರಾಟ ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮತ್ತು ನನ್ನ ಒಟ್ಟು ಕುಟುಂಬದ ಸದಸ್ಯರು ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಉಪನೋಂದಣಿ ಕಚೇರಿಯಲ್ಲಿ ಮಾರಾಟ ಮಾಡುವ ಸಮಯದಲ್ಲಿ ಆಗುವಂತಹ ಎಲ್ಲಾ ಪ್ರಕ್ರಿಯೆಗಳು ನನಗೆ ಗೊತ್ತು. ವಾದಿಯು ನನಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-1 ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿದ ಬಗ್ಗೆ ಪೊಲೀಸರಿಗೆ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ.

ಕರೋನಾ ಸಮಯದಲ್ಲಿ ಆಶಾಕಾರ್ಯಕರ್ತರ ಮೇಲೆ ನಾನು ಗಲಾಟೆ ಮಾಡಿದ ವಿಚಾರದಲ್ಲಿ ನನ್ನ ವಿರುದ್ಧ ಸಿ ಸಿ ನಂ.21/2021 ರ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯ ಚಿಕ್ಕಮ್ಮನ ಮಗ ಆಶಾಕಾರ್ಯಕರ್ತರ ಮೂಲಕ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ವಾದಿಯು ಸಹ ಸಾಕ್ಷಿದಾರ ಎಂದರೆ ಸರಿ. ಸದರಿ

ಪ್ರಕರಣದಲ್ಲಿ ನಾನು ವಾದಿಯನ್ನು ನನ್ನ ವಿರುದ್ಧವಾಗಿ ಸಾಕ್ಷಿ ಹೇಳಬೇಡ ಎಂದು ಕೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಸದರಿ ಮೇಲ್ಕಂಡ ಪ್ರಕರಣದಲ್ಲಿ ನನ್ನ ಪರವಾಗಿ ಸಾಕ್ಷ್ಯವನ್ನು ಹೇಳದಿದ್ದ ಕಾರಣ ನಾನು ನಿಪಿ-1 ಕ್ರಯದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಬಾಕಿ ಹಣವನ್ನು ಪಡೆದುಕೊಂಡು ಶುದ್ಧ ಕ್ರಯ ಪತ್ರವನ್ನು ಬರೆದುಕೊಡಲು ನಿರಾಕರಿಸಿರುತ್ತೀರಿ ಎಂದರೆ ಸರಿಯಲ್ಲ. ನನಗೆ ಹಣದ ಅವಶ್ಯಕತೆ ಇದ್ದ ಸಮಯದಲ್ಲಿ ನನಗೆ ಸೇರಿದ ಆಸ್ತಿಯನ್ನು ಮಾರಾಟ ಮಾಡಿದ್ದು ಅದೇ ರೀತಿ ವಾದಿಗೂ ಸಹ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈಗ ವಾದಿಯು ದನದ ಕೊಟ್ಟಿಗೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದನದ ಕೊಟ್ಟಿಗೆಯನ್ನು ನಾವು ಕಟ್ಟಿದ್ದೆವು ಆದರೆ ವಾದಿಯು ತನಗೆ ಸೇರಿದ ದನಗಳನ್ನು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಿದ್ಯುತ್ ಸಂಪರ್ಕವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ದನದ ಕೊಟ್ಟಿಗೆಯ ಸುತ್ತಲು ಸಿ ಸಿ ಕ್ಯಾಮೆರಾವನ್ನು ವಾದಿಯು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸುತ್ತ ಮುತ್ತಲು ನಾನು ಮಣ್ಣನ್ನು ತೆಗೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಮಾವನಾದ ಜಯನಾಯ್ಕರು ತೆಗೆಸುತ್ತಿದ್ದಾರೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ 7 ಛಾಯಾಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರಗಳು ದಾವಾ ಆಸ್ತಿಯ ಸುತ್ತ ಮುತ್ತಲು ಜೆ ಸಿ ಬಿ ಯಿಂದ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಸದರಿ ಕೆಲಸವನ್ನು ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಮಾಡುತ್ತಿರುವುದನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಛಾಯಾಚಿತ್ರಗಳನ್ನು ನಿಪಿ-9 ರಿಂದ 15 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿರುವ ದನದ ಕೊಟ್ಟಿಗೆ ದಾವಾ ಆಸ್ತಿಯಲ್ಲಿದೆ ಎಂದು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಛಾಯಾಚಿತ್ರವನ್ನು ನಿಪಿ-16 ಎಂದು ಗುರುತಿಸಲಾಯಿತು. ವಾದಿಯು ನನ್ನ ವಿರುದ್ಧ ಸಿ ಸಿ ಪ್ರಕರಣದಲ್ಲಿ ಸಾಕ್ಷಿ ಹೇಳುತ್ತಾನೆ ಎನ್ನುವ ಉದ್ದೇಶದಿಂದ ನಿಪಿ-1 ಕ್ರಯದ ಕರಾರು ಪತ್ರ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟಿಲ್ಲ ಹಣದ

ವಿಚಾರಕ್ಕೆ ಬರೆದುಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಇತರ ಆಸ್ತಿಗಳು ಇರುವುದರಿಂದ ದಾವಾ ಆಸ್ತಿಯನ್ನು ಮಾರಾಟ ಮಾಡಲು ನನಗೆ ಮತ್ತು ನನ್ನ ಹೆಂಡತಿಗೆ ಸಂಪೂರ್ಣ ಅಧಿಕಾರ ಇತ್ತು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಮತ್ತು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.